ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ,** ನೃಪತುಂಗ ರಸ್ತೆ, ಬೆಂಗಳೂರು–560001

ಸಂಖ್ಯೆ:ಸಶಿಕಾ/ಗುಖಾ/ಪೂ.ಪ್ರ/3/2019–20 ದಿನಾಂಕ: 23.06.2020

**ಸುತ್ತೋಲೆ**

**ವಿಷಯ:** ಸರ್ಕಾರಿ ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳ ನಿರ್ವಹಣೆ ಹಾಗೂ ಬಿಡುಗಡೆಯಾಗಿರುವ ಅನುದಾನವನ್ನು ಬಳಸುವ ಕುರಿತು.

**ಉಲ್ಲೇಖ:**

6. ಈ ಕಛೇರಿ ಸುತ್ತೋಲೆ ಸಂಖ್ಯೆ:SSK/QA/Pre-Primary/2019-20,ದಿ:20.05.2019.
7. ಆಯುಕ್ತರ ಕಛೇರಿ ಜ್ಞಾಪನ ಸಂಖ್ಯೆ:ಯೋ/ಕೆ.ಪಿ.ಎಸ್.ಅನು.ಬಿಡು/01/2019–20, ದಿ:29.06.2019.
8. ಸರ್ಕಾರಿ ಆದೇಶ ಸಂಖ್ಯೆ:ಇಡಿ 07 ಎಂ.ಎಂ.ಎಸ್ 2019, ಬೆಂಗಳೂರು, ದಿನಾಂಕ:13/8/2019.
9. ಆಯುಕ್ತರ ಕಛೇರಿ ಸುತ್ತೋಲೆ ಸಂ:ಎಂ2/ಅದಾ/ಜ.ನಿ/ಕೆಪಿಎಸ್/91/2019–20 ದಿನಾಂಕ:17.08.2019.
10. ಈ ಕಛೇರಿ ಸುತ್ತೋಲೆ ಸಂಖ್ಯೆ:SSK/QA/Pre-Primary/2/2019-20,ದಿ:28.08.2019.

* * * *

2019–20ನೇ ಸಾಲಿನಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು **ಸರ್ಕಾರಿ ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ** ಪ್ರಾರಂಭಿಸಲಾಗಿದೆ. ಉಲ್ಲೇಖ(1) ಹಾಗೂ (5)ರನ್ವಯ ಪೂರ್ವ ಪ್ರಾಥಮಿಕ ಶಿಕ್ಷಕರು ಮತ್ತು ಆಯಾಗಳನ್ನು ಎಸ್.ಡಿ.ಎಂ.ಸಿಯವರು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳುವ ಬಗ್ಗೆ, ಪೂರ್ವ ಪ್ರಾಥಮಿಕ ತರಗತಿ ಶಿಕ್ಷಕರಿಗೆ ಮತ್ತು ಆಯಾರವರಿಗೆ ನೀಡಬೇಕಾದ ಗೌರವಧನ, ತರಗತಿಗಳಿಗೆ ಒದಗಿಸಬೇಕಾದ ಅವಶ್ಯ ಸಾಮಗ್ರಿ ಕೊಠಡಿ ತಯಾರಿ, ಮುಂತಾದವುಗಳ ಕುರಿತು ಸವಿವರವಾದ ಮಾಹಿತಿಯನ್ನು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಕೋರೊನಾ ವೈರಸ್ ಸೋಂಕನ್ನು ತಡೆಗಟ್ಟಲು ಮುಂಜಾಗ್ರತಾ ಕ್ರಮವಾಗಿ ಸರ್ಕಾರವು ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಮಾರ್ಚ್–2ನೇ ವಾರದಿಂದ ಶಾಲೆಗಳಿಗೆ ರಜೆ ಘೋಷಿಸಿತ್ತು. ಪೂರ್ವ ಪ್ರಾಥಮಿಕ ಶಿಕ್ಷಕಿಯರು ದೈನಂದಿನ ಚಟುವಟಿಕೆಯಂತೆ ಶಾಲೆಗಳಿಗೆ ಹಾಜರಾಗಿರುತ್ತಾರೆ. ನಂತರ ಲಾಕ್‌ಡೌನ್ ಹಿನ್ನೆಲೆಯಲ್ಲಿ ಸರ್ಕಾರವು ದಿನಾಂಕ 23.03.2020 ರಿಂದ 31.03.2020ರವರೆಗೆ ಶಾಲೆಗಳಿಗೆ ರಜೆ ಘೋಷಿಸಿತ್ತು.

- ಪ್ರಸಕ್ತ ಸಾಲಿನ ಪೂರ್ವ ಪ್ರಾಥಮಿಕ ತರಗತಿಯ ಮಕ್ಕಳಿಗೆ ದಿನಾಂಕ.31.03.2020ಕ್ಕೆ ಶೈಕ್ಷಣಿಕ ವರ್ಷ ಅಂತ್ಯಗೊಂಡಿರುತ್ತದೆ.
- ಎಲ್.ಕೆ.ಜಿ ಹಂತದ ಮಕ್ಕಳಿಗೆ ನಿರ್ದಿಷ್ಟಪಡಿಸಿದ ಯಾವುದೇ ಶೈಕ್ಷಣಿಕ ಪರೀಕ್ಷೆ/ಮೌಲ್ಯಮಾಪನ ಮಾಡುವ ಅಗತ್ಯವಿರುವುದಿಲ್ಲ.
- ಎಲ್.ಕೆ.ಜಿ ಮಕ್ಕಳನ್ನು ಸ್ವಯಂಚಾಲಿತವಾಗಿ 2020–21ನೇ ಸಾಲಿಗೆ ಯು.ಕೆ.ಜಿ ತರಗತಿಗೆ ಮುಂದುವರೆಸುವುದು.
- ಪೂರ್ವ ಪ್ರಾಥಮಿಕ ಶಿಕ್ಷಕಿಯರನ್ನು/ಆಯಾರವರನ್ನು 10 ತಿಂಗಳ ಶೈಕ್ಷಣಿಕ ವರ್ಷಕ್ಕೆ ಎಸ್.ಡಿ.ಎಂ.ಸಿ ವತಿಯಿಂದ ನೇಮಕ ಮಾಡಿಕೊಂಡಿರುವುದರಿಂದ ಮಾರ್ಚ್ 31 ರವರೆಗೆ ಗೌರವ ಸಂಭಾವನೆಯನ್ನು ನೀಡುವುದು ಹಾಗೂ ಕರ್ತವ್ಯದಿಂದ ಬಿಡುಗಡೆಗೊಂಡ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಖಾತ್ರಿಪಡಿಸಿಕೊಳ್ಳುವುದು.
- ರಾಜ್ಯದ 276 ಕೆ.ಪಿ.ಎಸ್‌ಗಳಲ್ಲಿ 2020–21ನೇ ಸಾಲಿಗೆ 1ನೇ ತರಗತಿಗೆ ಮಕ್ಕಳನ್ನು ದಾಖಲಿಸುವ ರೀತಿಯಲ್ಲಿಯೇ, ಎಲ್.ಕೆ.ಜಿ ತರಗತಿಗಳಿಗೆ 3.5 ವರ್ಷ ಮೇಲ್ಪಟ್ಟ ವಯಸ್ಸಿನ ಮಕ್ಕಳನ್ನು ದಾಖಲು ಮಾಡಿಕೊಳ್ಳುವುದು. ದಾಖಲಾತಿಯನ್ನು 30 ಮಕ್ಕಳಿಗೆ ಮಿತಿಗೊಳಿಸಿಕೊಳ್ಳುವುದು.
- 2019–20ನೇ ಸಾಲಿಗೆ ನೇಮಕವಾಗಿದ್ದ ಎಲ್.ಕೆ.ಜಿ ಶಿಕ್ಷಕಿಯರನ್ನು 2020–21ನೇ ಸಾಲಿಗೆ ಯು.ಕೆ.ಜಿ ತರಗತಿಗೆ ನೇಮಕ ಮಾಡುವುದು. ಒಬ್ಬರೇ ಆಯಾರನ್ನು ಎರಡು ತರಗತಿಗಳಿಗೆ ನೇಮಕ ಮಾಡುವುದು. ಶಾಲೆ ಆರಂಭದ ನಂತರ ಗೌರವ ಸಂಭಾವನೆಯನ್ನು ನೀಡುವುದು.

- ಉಲ್ಲೇಖ(1) ರ ಸುತ್ತೋಲೆಯನ್ವಯ ಮಾನದಂಡಗಳನ್ನಾಧರಿಸಿ ಹೊಸ ಎಲ್.ಕೆ.ಜಿ ತರಗತಿಗೆ ಪೂರ್ವ ಪ್ರಾಥಮಿಕ ಶಿಕ್ಷಕಿಯನ್ನು ಎಸ್.ಡಿ.ಎಂ.ಸಿ ವತಿಯಿಂದ ನೇಮಕ ಮಾಡಿಕೊಳ್ಳುವುದು ಹಾಗೂ ಗೌರವ ಸಂಭಾವನೆಯನ್ನು ಶಾಲೆಯ ಆರಂಭದ ದಿನಾಂಕದಿಂದ ನೀಡಲು ಕ್ರಮಕೈಗೊಳ್ಳುವುದು.

23/6/20

(ಡಾ||ಕೆ.ಜಿ.ಜಗದೀಶ) ಭಾ.ಆ.ಸೇ
ಆಯುಕ್ತರು, ಸಾ.ಶಿ.ಇ
ಬೆಂಗಳೂರು.

ರವರಿಗೆ: ರಾಜ್ಯದ ಎಲ್ಲಾ ಕರ್ನಾಟಕ ಪಬ್ಲಿಕ್ ಶಾಲೆಗಳ ಮುಖ್ಯಸ್ಥರುಗಳಿಗೆ, ಅಗತ್ಯಕ್ರಮಕ್ಕಾಗಿ

ಮಾಹಿತಿ ಮತ್ತು ಅಗತ್ಯ ಅನುಸರಣೆಗಾಗಿ.

1. ಸಹನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ. ಸಾರ್ವಜನಿಕ ಶಿಕ್ಷಣ ಇಲಾಖೆ
2. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ
3. ರಾಜ್ಯದ ಎಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ.
4. ರಾಜ್ಯದ ಎಲ್ಲಾ ಪ್ರಾಂಶುಪಾಲರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ/ ಉಪನಿರ್ದೇಶಕರು (ಅಭಿವೃದ್ಧಿ),ಸಾ.ಶಿ. ಇಲಾಖೆ
5. ರಾಜ್ಯದ ಎಲ್ಲಾ ಜಿಲ್ಲಾ ಉಪಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ.
6. ರಾಜ್ಯದ ಎಲ್ಲಾ ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ.
7. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು.

ಪ್ರತಿ ಮಾಹಿತಿಗಾಗಿ ಸಲ್ಲಿಸಿದೆ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಗೌರವಪೂರ್ವಕವಾಗಿ ಸಲ್ಲಿಸಿದೆ.
2. ರಾಜ್ಯಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ-ಕರ್ನಾಟಕ, ಬೆಂಗಳೂರು.
3. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
4. ಅಪರಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ, ಕಲುಬುರ್ಗಿ.